# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 303 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಮಾನ್ಯ ಅಬಕಾರಿ ಸಚಿವರು |
| ಉತ್ತರಿಸುವ ದಿನಾಂಕ | 06-03-2025 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಕೇರಳ ಗಡಿಗೆ ಹೊಂದಿಕೊಂಡಿರುವ ಮೈಸೂರು ಜಿಲ್ಲೆಯ ಬಾವಲಿ, ಕಡೆಗದ್ದೆ, ತಿಮ್ಮನಹೊಸಹಳ್ಳಿ, ಡಿ.ಬಿ. ಕುಪ್ಪೆ ಆನೆಮಾಲದಲ್ಲಿರುವ ವಿವಿಧ ಹಾಡಿಗಳವರು ಮದ್ಯದಂಗಡಿಗಳನ್ನು ಮುಚ್ಚಿಸುವಂತೆ ಹಾಗೂ ಮದ್ಯವ್ಯಸನಿಗಳಿಂದ ಆಗುತ್ತಿರುವ ತೊಂದರೆಯನ್ನು ತಪ್ಪಿಸುವಂತೆ ಕಳೆದ 10 ವರ್ಷಗಳಿಂದ ಸರ್ಕಾರವನ್ನು ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮೈಸೂರು ಜಿಲ್ಲೆಯ ಕೇರಳ ರಾಜ್ಯದೊಂದಿಗೆ ಗಡಿಹೊಂದಿರುವ ಬಾವಲಿ, ಕಡೆಗದ್ದೆ, ತಿಮ್ಮನಹೊಸಹಳ್ಳಿ, ಡಿ.ಬಿ ಕುಪ್ಪೆ ಆನೆಮಾಳದ ವಿವಿಧ ಹಾಡಿಯ ನಿವಾಸಿಗಳು ಮದ್ಯದಂಗಡಿಗಳನ್ನು ತೆರವುಗೊಳಿಸುವಂತೆ ಸಲ್ಲಿಸಿರುವ ಮನವಿ ಗಮನಕ್ಕೆ ಬಂದಿರುತ್ತದೆ. ಈ ಕುರಿತು ಪರಿಶೀಲನೆಗೊಳಪಡಿಸಿ ಮನವಿದಾರರಿಗೆ ಸೂಕ್ತ ಹಿಂಬರಹ ನೀಡಲಾಗಿರುತ್ತದೆ. |
| ಆ) | ಬಂದಿದ್ದಲ್ಲಿ, ಪರಿಸರ ಸೂಕ್ಷ್ಮ ವಲಯದಲ್ಲಿರುವ ಈ ಸ್ಥಳದಲ್ಲಿ ನಿಯಮ ಮೀರಿ ಸಿಎಲ್-7 ಪರವಾನಿಗೆ ನೀಡಿರುವುದರ ಪರಿಣಾಮ ಈ ಸ್ಥಳದಲ್ಲಿ ನಿವಾಸಿಗಳು ಕುಡುಕರ ಹಾವಳಿಯಿಂದ ಬೇಸತ್ತು ಆತಂಕದಿಂದ ಜೀವನ ನಿರ್ವಹಣೆ ಮಾಡುತ್ತಿರುವುದನ್ನು ಸರಿಪಡಿಸಲು ಸರ್ಕಾರ | ಕಡೆಗದ್ದೆ ಗ್ರಾಮದಲ್ಲಿ ಸಿಎಲ್-7 ಸನ್ನದು ದಿನಾಂಕ: 08-11-2012 ರಂದು ಮಂಜೂರಾಗಿ, ಕಾರ್ಯನಿರ್ವಹಿಸಿ ನಂತರ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ,ಹುಣಸೂರು ಇವರ ವರದಿ ಮೇರೆಗೆ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಇವರು |

| | | |
|---|---|---|
| | ಕೈಗೊಂಡ ಕ್ರಮಗಳೇನು; | ದಿನಾಂಕ:19-12-2014 ರ ಆದೇಶದಲ್ಲಿ ಸದರಿ ಸಿಎಲ್-7 ಸನ್ನದನ್ನು ರದ್ದುಪಡಿಸಲಾಗಿತ್ತು. ನಂತರ ಅರಣ್ಯ ಇಲಾಖೆಯವರು ದಿನಾಂಕ:23-11-2023 ಹಾಗೂ 28-11-2023 ರಂದು ನೀಡಿರುವ ನಿರಾಕ್ಷೇಪಣಾ ಪತ್ರದ ಹಿನ್ನಲೆಯಲ್ಲಿ ಅದೇ ಸನ್ನದನ್ನು ನವೀಕರಣಗೊಳಿಸಲಾಗಿರುತ್ತದೆ. ಪ್ರಸ್ತುತ ಅವಧಿಗೆ ಕರ್ನಾಟಕ ಅಬಕಾರಿ ಕಾಯ್ದೆ/ನಿಯಮಾನುಸಾರ ಕಾರ್ಯನಿರ್ವಹಿಸುತ್ತಿದೆ.<br><br>ವ್ಯಾಪ್ತಿಯ ಅಬಕಾರಿ ಅಧಿಕಾರಿಗಳು ಸದರಿ ಸಿಎಲ್-7 ಸನ್ನದನ್ನು ನಿಯಮಿತವಾಗಿ ಅನಿರೀಕ್ಷಿತ ಭೇಟಿ ನೀಡಿ, ತಪಾಸಣೆಗೆ ಒಳಪಡಿಸಲಾಗುತ್ತಿರುತ್ತದೆ. ತಪಾಸಣೆ ಸಂದರ್ಭದಲ್ಲಿ ಕಂಡುಬಂದ ಸನ್ನದು ಷರತ್ತು ಉಲ್ಲಂಘನೆಯ ನ್ಯೂನತೆಗಳಿಗೆ ಸಂಬಂಧಿಸಿದಂತೆ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. |
| ಇ) | ಕೇರಳದ ಯುವಕರು ಮದ್ಯದ ಜೊತೆಗೆ ಗಾಂಜಾ ಸೇವಿಸಿ ಅರಣ್ಯ ಪ್ರವೇಶಿಸಿ ಅನಾಹುತ ಎಸಗುತ್ತಿದ್ದು, ಇದನ್ನು ನಿಯಂತ್ರಿಸಲು ಹಾಗೂ ಅದಕ್ಕೆ ಕಡಿವಾಣ ಹಾಕಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಗಡಿಭಾಗದ ಗ್ರಾಮಗಳಿಗೆ ಕೇರಳ ರಾಜ್ಯದ ಜನರು ತಮ್ಮ ದೈನಂದಿನ ವ್ಯವಹಾರಗಳಿಗಾಗಿ ಭೇಟಿ ನೀಡುತ್ತಿದ್ದು, ಸಾರ್ವಜನಿಕ ಪ್ರದೇಶದಲ್ಲಿ ಮದ್ಯ ಸೇವನೆ ಮಾಡಿ ಅಸಭ್ಯವಾಗಿ ವರ್ತಿಸಿ, ಸಾರ್ವಜನಿಕ ಉಪದ್ರವವನ್ನುಂಟುಮಾಡಿರುವ ಕುರಿತಂತೆ ಹೆಚ್.ಡಿ. ಕೋಟೆ ತಾಲ್ಲೂಕಿನ ಅಂತರಸಂತೆ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ:72/2023 ರಲ್ಲಿ ಕೇರಳ ರಾಜ್ಯದ ವಾಸಿಯಾದ ಜೈಮಾನ್ ಬಿನ್ ಜೇಮ್ಸ್ ಮತ್ತು ಇತರರ ವಿರುದ್ಧ ದಿನಾಂಕ:11-08-2023 ರಂದು ಪ್ರಕರಣ ದಾಖಲಾಗಿದ್ದು, ಪ್ರಕರಣವನ್ನು ನ್ಯಾಯಾಲಯವು ದಂಡ ವಿಧಿಸಿ ಇತ್ಯರ್ಥಗೊಳಿಸಲಾಗಿರುತ್ತದೆ.<br><br>ಇಲಾಖಾಧಿಕಾರಿಗಳು ಕೇರಳ ರಾಜ್ಯದ ಅಬಕಾರಿ ಅಧಿಕಾರಿಗಳೊಂದಿಗೆ ಜಂಟಿಯಾಗಿ ಕಾರ್ಯಾಚರಣೆ ನಡೆಸಿ |

| | | |
|---|---|---|
| | | ಕಡೆಗದ್ದೆ ಗ್ರಾಮದಲ್ಲಿ 15.920 ಕೆ.ಜಿ. ಹಸಿ ಗಾಂಜಾ (25 ಗಿಡಗಳು) ವಶಪಡಿಸಿಕೊಂಡು, ಆರೋಪಿಯನ್ನು ಬಂಧಿಸಿ ಎನ್.ಡಿ.ಪಿ.ಎಸ್ ಕಾಯ್ದೆಯಡಿಯಲ್ಲಿ ಅಬಕಾರಿ ನಿರೀಕ್ಷಕರು, ಹೆಚ್.ಡಿ ಕೋಟೆ ವಲಯ ಇವರು ಮೊಕದ್ದಮೆ ಸಂಖ್ಯೆ: 32/2023-24, ದಿನಾಂಕ:19-02-2024 ರಲ್ಲಿ ಮೊಕದ್ದಮೆಯನ್ನು ದಾಖಲಿಸಿ, ತನಿಖೆ ಪೂರ್ಣಗೊಳಿಸಿ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ.<br><br>ಅಬಕಾರಿ ನಿರೀಕ್ಷಕರು, ಹೆಚ್.ಡಿ ಕೋಟೆ ವಲಯ ರವರು ಒಡಕನಮಾಳ ಗ್ರಾಮದಲ್ಲಿ ಅಬಕಾರಿ ದಾಳಿ ನಡೆಸಿ 4 ಕೆ.ಜಿ. ಒಣ ಗಾಂಜಾವನ್ನು ವಶಪಡಿಸಿಕೊಂಡು, ಆರೋಪಿಯನ್ನು ಬಂಧಿಸಿ ಎನ್.ಡಿ.ಪಿ.ಎಸ್ ಕಾಯ್ದೆಯಡಿಯಲ್ಲಿ ಮೊಕದ್ದಮೆ ಸಂಖ್ಯೆ:119/2023-24,ದಿನಾಂಕ:07-05-2024 ರಲ್ಲಿ ಮೊಕದ್ದಮೆ ದಾಖಲಿಸಿ, ತನಿಖೆ ಪೂರ್ಣಗೊಳಿಸಿ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ.<br><br>ಈ ಪ್ರದೇಶದಲ್ಲಿ ಯಾವುದೇ ಅಬಕಾರಿ ಅಕ್ರಮಗಳು ಜರುಗದಂತೆ ಪರಿಣಾಮಕಾರಿಯಾಗಿ ನಿರ್ವಹಿಸಲು ಜಾರಿ ಮತ್ತು ತನಿಖಾ ಕಾರ್ಯವನ್ನು ಚುರುಕುಗೊಳಿಸಲಾಗಿದೆ. ನಿರಂತರ ಗಸ್ತು, ರಸ್ತೆ ಕಾವಲು, ಶಂಕಿತ ವಾಹನಗಳ ತಪಾಸಣೆ ಮತ್ತು ಹಳೇ ಆರೋಪಿಗಳ ಚಲನ-ವಲನಗಳ ಬಗ್ಗೆ ನಿಗಾವಹಿಸಲಾಗಿರುತ್ತದೆ. |

ಆಣ 15 ಇವಲ್‌ಕ್ಯೂ 2025

(ಆರ್.ಬಿ. ತಿಮ್ಮಾಪುರ)

ಅಬಕಾರಿ ಸಚಿವರು